Prepp
Your Personal Exams Guide

Language Code : **07**

इस पुस्तिका में **20** मुद्रित पृष्ठ हैं।
This booklet contains **20** Printed pages.

# FSC-26-I

## प्रश्न-पत्र-I / PAPER-I
## कन्नड़ भाषा परिशिष्ट
## Kannada Language Supplement
## भाग-IV & V / PART-IV & V

मुख्य परीक्षा पुस्तिका संख्या / Main Test Booklet No.

मुख्य परीक्षा पुस्तिका कोड / Main Test Booklet Code

**E**

इस परीक्षा पुस्तिका को तब तक न खोलें जब तक कहा न जाए।
**Do not open this Test Booklet until you are asked to do so.**
इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

### परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं OMR उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **E**। यह सुनिश्चित कर लें कि इस भाषा परिशिष्ट पुस्तिका का संकेत, OMR उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :

   | | |
   |---|---|
   | भाग-IV : भाषा-I (कन्नड़) | (प्र. 91 से प्र. 120) |
   | भाग-V : भाषा-II (कन्नड़) | (प्र. 121 से प्र. 150) |

7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

### INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the OMR Answer Sheet.
5. The CODE for this Language Booklet is **E**. Make sure that the CODE printed on **Side-2** of the OMR Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :

   | | |
   |---|---|
   | Part-IV : Language-I (Kannada) | (Q. 91 to Q. 120) |
   | Part-V : Language-II (Kannada) | (Q. 121 to Q. 150) |

7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) / Roll Number : in figures ____________________
: शब्दों में / in words ____________________
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________________ निरीक्षक के हस्ताक्षर : ____________________
Candidate's Signature : Invigilator's Signature :
Facsimile Signature Stamp of
Centre Superintendent : ____________________

Prepp
Your Personal Exams Guide

Language Code : **07**

# FSC-26-I

**ಪ್ರಶ್ನೆ ಪತ್ರಿಕೆ–I**
**ಕನ್ನಡ ಭಾಷಾ ಪೂರಕ**
**ಭಾಗ IV ಮತ್ತು V**

**ಪ್ರಶ್ನೆ ಪುಸ್ತಿಕೆ ಸಂಕೇತ**

**E**

**ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**
**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**
**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ.**
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು OMR ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ** E ಆಗಿದೆ. OMR ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.
   ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ______________________

: (ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of
Centre Superintendent : ______________________

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 91 - 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

Prepp
Your Personal Exams Guide

# PART-IV
# LANGUAGE-I
# KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **91-120**) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಮುಮ್ಮಡಿ ಕೃಷ್ಣರಾಜ ಒಡೆಯರ ಚರಿತ್ರೆಯೊಂದಿಗೆ ಗಾಢವಾಗಿ ತಳುಕು ಹಾಕಿಕೊಂಡ ಹೆಸರು 'ಬಕ್ಷಿ ತಿಪ್ಪಯ್ಯ'ನವರದು. ಒಡೆಯರು ಶಿಶುವಾಗಿದ್ದಾಗ ಅವರನ್ನು ಸಂರಕ್ಷಿಸಿದ್ದು, ಬೆಳೆಸಿದ್ದು, ಅವರು ಸಿಂಹಾಸನಾಧೀಶರಾದಾಗ ಬೆನ್ನೆಲುಬಾಗಿ ನಿಂತದ್ದು ತಿಪ್ಪಯ್ಯನವರ ವಂಶ ಚರಿತ್ರೆಯಲ್ಲಿ ಮುಖ್ಯವಾಗಿ ಕಾಣುವ ಸಂಗತಿ. ಅಂಥ ಐತಿಹಾಸಿಕ ವಂಶದಲ್ಲಿ ಬಂದವರು ಎಸ್.ಆರ್. ವೆಂಕಟರಾಮಯ್ಯನವರು.

ಸಂಕೇತಿ ಸಮುದಾಯವು ನಗರವಾಸಕ್ಕೆ ತೊಡಗಿಕೊಂಡದ್ದು ಮತ್ತು ಆಧುನಿಕ ವಿದ್ಯಾಭ್ಯಾಸಕ್ಕೆ ತೆರೆದುಕೊಂಡದ್ದು ಬಹಳ ನಿಧಾನವಾಗಿ. ಆದರೆ ಅಂಚೆ ಬಕ್ಷಿ ತಿಪ್ಪಯ್ಯನವರದು ಆಧುನಿಕತೆಗೆ ಬೇಗ ಪ್ರವೇಶಿಸಿದ ಕೆಲವೇ ಸಂಕೇತಿ ಮನೆತನಗಳಲ್ಲಿ ಒಂದು.

ಟಿಪ್ಪು ಸುಲ್ತಾನನ ಆಳ್ವಿಕೆಯಲ್ಲಿಯೂ ತಿಪ್ಪಯ್ಯನವರು ಸಚಿವರಾಗಿದ್ದರು. ಮತಾಂತರ ಪ್ರವೃತ್ತಿಯ ದೌರ್ಬಲ್ಯವಿದ್ದ ಟಿಪ್ಪು ಆಗಾಗ ಹಿಂದೂ ಅಧಿಕಾರಿಗಳಿಗೆ ಕಿರುಕುಳ ಕೊಡುತ್ತಿದ್ದ. ತಮ್ಮ ಪ್ರಾಮಾಣಿಕತೆ, ಬುದ್ಧಿ ಸಾಮರ್ಥ್ಯ. ಕರ್ತೃತ್ವಶೀಲತೆಯಿಂದಲೇ ಈ ಉಪಟಳಗಳಿಂದ ಪಾರಾಗಬೇಕಾಗಿತ್ತು. ಸಂಸ್ಥಾನವು ಎದುರಿಸಿದ ಲೆಕ್ಕ ಪತ್ರಗಳ ಬಿಕ್ಕಟ್ಟೊಂದನ್ನು ಪರಿಹರಿಸಬೇಕಾದ ಜವಾಬ್ದಾರಿಯನ್ನು ಒಮ್ಮೆ ತಿಪ್ಪಯ್ಯನವರಿಗೆ ವಹಿಸಲಾಯಿತು. ಉನ್ನತ ಮುಸಲ್ಮಾನ ಅಧಿಕಾರಿಗಳ ಸುತ್ತ ಹೆಣೆದುಕೊಂಡಿದ್ದ ಈ ಹಗರಣವನ್ನು ಉಪಾಯವಾಗಿ ಕೊನೆಮುಟ್ಟಿಸಬೇಕಾಗಿತ್ತು. ಯಾವ ಮಗ್ಗುಲಿಗೆ ವಾಲಿದರೂ ಕತ್ತಿಯ ಮೊನೆಯ ಅಪಾಯ ಇದ್ದೇ ಇತ್ತು. ಅಂಥ ಸಂದರ್ಭದಲ್ಲಿ ತಿಪ್ಪಯ್ಯನವರು ಶ್ರೀರಂಗಪಟ್ಟಣದ ರಂಗನಾಥನ ಮೊರೆ ಹೊಕ್ಕರು. ಈ ಸಮಸ್ಯೆ ಯಶಸ್ವಿಯಾಗಿ ಬಗೆಹರಿದರೆ ಸ್ವಾಮಿಗೆ ಪುಷ್ಪ ಬೃಂದಾವನೋತ್ಸವ ನಡೆಸುವುದಾಗಿ ಹರಕೆ ಹೊತ್ತರು; ಟಿಪ್ಪು ಮೆಚ್ಚುವ ರೀತಿಯಲ್ಲಿ ಸಮಸ್ಯೆಗೆ ತೆರೆ ಎಳೆದರು; ಎಲ್ಲ ಬಣದ ಮುಸಲ್ಮಾನ ಅಧಿಕಾರಿಗಳೂ ಅನಿವಾರ್ಯವಾಗಿ ಒಪ್ಪಿ ತಟಸ್ಥರಾಗುವಂತೆ ಈ ಸೂಕ್ಷ್ಮ ಕೆಲಸವನ್ನು ನಿರ್ವಹಿಸಿದರು. ತಿಪ್ಪಯ್ಯನವರು ಸನ್ಮಾನಿತರಾದರು. ಅದು ಉತ್ಥಾನ ದ್ವಾದಶಿಯ ದಿನ. ಅಂದೇ ಪುಷ್ಪ ಬೃಂದಾವನೋತ್ಸವವನ್ನೂ ಪ್ರಾರಂಭಿಸಿದರು. ಅದು ಆ ಮನೆತನದವರೇ ನಡೆಸುವ ವಾರ್ಷಿಕ ಉತ್ಸವವಾಗಿ ಮುಂದುವರಿಯಿತು.

ಬಕ್ಷಿ ತಿಪ್ಪಯ್ಯನವರಿಗೆ (ಈಗಿನ) ಹಾಸನ ಜಿಲ್ಲೆಯಲ್ಲಿ ಹಲವು ಇನಾಂ ಗ್ರಾಮಗಳಿದ್ದವು. ಅಲ್ಲಿ ಬೆಳೆದಿರುತ್ತಿದ್ದ ಗಂಧದ ಮರಗಳನ್ನು ಕೊಂಡು ಸರ್ಕಾರ ಹಣ ಕೊಡುತ್ತಿತ್ತು. ಹಾಗೆ ಬಂದ 'ಗಂಧದ ಹಣ' ದಿಂದ ಈ ಉತ್ಸವ ಅನೂಚಾನವಾಗಿ ನಡೆದುಕೊಂಡು ಹೋಗಬೇಕೆಂದು ತಿಪ್ಪಯ್ಯನವರು 'ವಿಲ್' ಬರೆದಿಟ್ಟರು. ಅದರಂತೆ ಅದು ತಲೆಮಾರುಗಳನ್ನು ದಾಟಿ ನಡೆದುಕೊಂಡು ಬಂತು. ಮುಂದೆ ಇನಾಂ ಪದ್ಧತಿ ರದ್ದು ಆಯಿತು. ಈ ವಂಶದವರು ಹಲವು ಕಡೆ ಚದುರಿದ್ದರು. ಉತ್ಸವವೂ ನಿಂತಿತು. ಇಂಥ ಸಂದರ್ಭದಲ್ಲಿ ಒಮ್ಮೆ ಸಬ್‌ಓವರ್‌ಸೀಯರ್ ಟಿ. ರಂಗಸ್ವಾಮಯ್ಯನವರು ಶ್ರೀರಂಗಪಟ್ಟಣಕ್ಕೆ ವರ್ಗವಾಗಿ ಬಂದರು. ರಾಮನಾಥಪುರ, ಕಟ್ಟೆಪುರದ ನಾಲೆ ಕಾಮಗಾರಿಯನ್ನು ನಿರ್ವಹಿಸಿ ಜನಪ್ರಿಯರಾಗಿದ್ದವರು ಅವರು. ಈ ಉತ್ಸವವನ್ನು ಮುಂದುವರೆಸಬೇಕೆಂಬ ಪ್ರೇರಣೆಯಾಯಿತು; ಮತ್ತೆ ನಡೆಸತೊಡಗಿದರು. ಅವರ ಮಗ ಎಸ್.ಆರ್. ವೆಂಕಟರಾಮಯ್ಯನವರು ತಮಗೆ ನೌಕರಿ ಇಲ್ಲದಾಗಲೂ ಬಿಡದೆ ಅದನ್ನು ಮುಂದುವರೆಸಿದರು. ಮುಂದೆ ನೌಕರಿ ದೊರೆತಾಗ, 'ಕೆಲಸ ಇಲ್ಲದಾಗಲೂ ಉತ್ಸವ ಮಾಡಿಸಿದ್ದೆ; ದೇವರು ಈಗ ಕೆಲಸ ಕೊಡಿಸಿದ್ದಾನೆ; ಈಗ ಬಿಡುವುದುಂಟೆ?' ಎಂಬ ಭಕ್ತಿ ವಿಶೇಷದಿಂದ ಪರಂಪರೆಯನ್ನು ಬೆಳೆಸಿದರು.

ಬಕ್ಷಿ ತಿಪ್ಪಯ್ಯನವರ ವಂಶದವರಿಗೆ 'ಮೈಸೂರು ಮನೆಯವರು' ಎಂಬ ನಾಮಧೇಯವಿದೆ. ಅದರ ಮೂರು ಕವಲುಗಳು 'ಹೊಸಮನೆ', 'ಹಿಂದಿನ ಮನೆ', 'ತೊಟ್ಟಿ ಮನೆ' ಎನಿಸಿವೆ. ವೆಂಕಟರಾಮಯ್ಯನವರು 'ಹೊಸಮನೆ' ಕವಲಿಗೆ ಸೇರಿದವರು. ಈ ಮೂರೂ ಕವಲುಗಳೂ ಪರ್ಯಾಯವಾಗಿ ಮೂರು ವರ್ಷಗಳಿಗೊಮ್ಮೆ ಈ ಉತ್ಸವದ ಹೊಣೆ ಹೊತ್ತು ಇಂದಿಗೂ ನಡೆಸಿಕೊಂಡು ಬರುತ್ತಿವೆ.

**91.** 'ಪರ್ಯಾಯವಾಗಿ' ಪದದ ಅರ್ಥ :

(1) ವಿಪರೀತವಾಗಿ (2) ಹೊಸದಾಗಿ

(3) ಬದಲಿಯಾಗಿ (4) ಹೆಚ್ಚುವರಿಯಾಗಿ

Prepp
Your Personal Exams Guide

**92.** 'ಗಂಧದ' ಪದದಲ್ಲಿರುವ ವಿಭಕ್ತಿ ಪ್ರತ್ಯಯ :

(1) ಸಪ್ತಮಿ ವಿಭಕ್ತಿ (2) ಪ್ರಥಮ ವಿಭಕ್ತಿ
(3) ಷಷ್ಠಿ ವಿಭಕ್ತಿ (4) ದ್ವಿತೀಯ ವಿಭಕ್ತಿ

**93.** ಗಂಧದ ಮರದ ಮಾರಾಟದಿಂದ ಬರುವ ಹಣವನ್ನು ತಿಪ್ಪಯ್ಯನವರು ಏನು ಮಾಡಿದರು ?

(1) ಪುಷ್ಪ ಬೃಂದಾವನೋತ್ಸವ ನಡೆಸಲು ವಿಲ್ ಮಾಡಿಟ್ಟರು
(2) ದಾನ ಮಾಡಿದರು
(3) ದೇವಾಲಯ ನಿರ್ಮಿಸಿದರು
(4) ನಾಲೆಗಳನ್ನು ನಿರ್ಮಿಸಿದರು

**94.** 'ಇನಾಂ' ಪದದ ಮೂಲ ಯಾವುದು ?

(1) ಮರಾಠಿ (2) ಹಿಂದಿ
(3) ಕನ್ನಡ (4) ಪರ್ಷಿಯನ್

**95.** ಟಿಪ್ಪು ಸುಲ್ತಾನರ ಕಾಲದಲ್ಲಿ ಯಾರು ಸಚಿವರಾಗಿದ್ದರು ?

(1) ರಂಗಸ್ವಾಮಯ್ಯ (2) ಸುಬ್ಬರಾಯ ಶಾಸ್ತ್ರಿಗಳು
(3) ವೆಂಕಟರಾಮಯ್ಯ (4) ತಿಪ್ಪಯ್ಯ

**96.** ವೆಂಕಟರಾಮಯ್ಯನವರು ಯಾವ ಮನೆತನಕ್ಕೆ ಸೇರಿದ್ದರು ?

(1) ಸಂಕೇತಿ ಮನೆತನ (2) ಶ್ರೀರಂಗಪಟ್ಟಣ ಮನೆತನ
(3) ಮೈಸೂರು ಮನೆತನ (4) ಟಿಪ್ಪು ಮನೆತನ

**97.** ವೆಂಕಟರಾಮಯ್ಯನವರು ಯಾವ ಕವಲಿಗೆ ಸೇರಿದ್ದರು ?

(1) ಹಿಂದಿನ ಮನೆ (2) ಮುಂದಿನ ಮನೆ
(3) ತೊಟ್ಟಿ ಮನೆ (4) ಹೊಸ ಮನೆ

**98.** ಬಕ್ಷಿ ತಿಮ್ಮಪ್ಪನಿಗೆ ಎಲ್ಲಿ ಇನಾಂ ಗ್ರಾಮಗಳಿದ್ದವು ?

(1) ಶ್ರೀರಂಗಪಟ್ಟಣ (2) ಬೆಂಗಳೂರು
(3) ಹಾಸನ (4) ಮೈಸೂರು

**99.** ಬೃಂದಾವನೋತ್ಸವ ಪದದಲ್ಲಿನ ಸಂಧಿ ಯಾವುದು ?

(1) ಗುಣ ಸಂಧಿ (2) ಆದೇಶ ಸಂಧಿ
(3) ಯಣ್ ಸಂಧಿ (4) ಜಸ್ತ್ವ ಸಂಧಿ

Prepp
Your Personal Exams Guide

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100-105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ನಿಮ್ಮೊಡನಿದ್ದೂ ನಿಮ್ಮಂತಾಗದೆ ಜಗ್ಗಿದ ಕಡೆ ಬಾಗದೆ
ನಾನು ನಾನೇ ಆಗಿ, ಈ ನೆಲದಲ್ಲಿ ಬೇರೊತ್ತಿದರೂ ಬೀಗಿ
ಪರಕೀಯನಾಗಿ ತಲೆಯೆತ್ತುವುದಿದೆ ನೋಡಿ
ಅದು ಬಲುಕಷ್ಟದ ಕೆಲಸ.
ವೃತ್ತದಲ್ಲಿ ಉನ್ಮತ್ತರಾದ
ನಿಮ್ಮ ಕುಡಿತ ಕುಣಿತ ಕೂಟಗಳು ಕೆಣಕಿ
ಕುಣಿಕೆ ಎಸೆದಿದ್ದರೂ
ಪಂಚೇಂದ್ರಿಯಕ್ಕೆ ಲಗಾಮು ಜಡಿದು ಜಾರದೆ ನಿಮ್ಮತ್ತ :
ಸಂಯಮವನ್ನೇ ಪೋಷಿಸಿ ಸಾಕುತ್ತ
ರೇಖೆಯಲ್ಲೇ ದೊಂಬರಾಟ ನಡೆಸುವುದಿದೆ ನೋಡಿ
ಅದು ಬಲು ಕಷ್ಟದ ಕೆಲಸ.

**100.** 'ಲಗಾಮು' – ಈ ಪದದ ಮೂಲ ಯಾವುದು ?
(1) ಹಿಂದಿ
(2) ಉರ್ದು
(3) ಪ್ರಾಕೃತ
(4) ಹಿಂದೂಸ್ತಾನಿ

**101.** 'ನೆಲದಲ್ಲಿ ಬೇರೂರು' – ಈ ವಾಕ್ಯಾಂಶದ ಅರ್ಥ :
(1) ಮಣ್ಣಿಗೆ ಅಂಟಿಕೊಳ್ಳುವುದು
(2) ಈ ಭೂಮಿಯ ಬದುಕೇ ಮುಖ್ಯವೆಂದು ತಿಳಿಯುವುದು
(3) ಒಬ್ಬರಿಗೆ ಭಾರವಾಗು
(4) ಹುಟ್ಟಿದ ನೆಲದಲ್ಲಿ ನೆಲಸು

**102.** ಎರಡನೆಯ ಕಷ್ಟದ ಕೆಲಸ ಯಾವುದು ?
(1) ಇಂದ್ರಿಯಗಳನ್ನು ಹತೋಟಿಯಲ್ಲಿಡುತ್ತ ಸಂಯಮ ತೋರುವುದು
(2) ಪಂಚೇಂದ್ರಿಯಗಳು ಹತೋಟಿಗೆ ಬಾರದೆ ಒದ್ದಾಡುವುದು
(3) ಹಗ್ಗದ ಮೇಲೆ ದೊಂಬರಾಟ ನಡೆಸುವುದು
(4) ಪಂಚೇಂದ್ರಿಯಕ್ಕೆ ಲಗಾಮು ಹಾಕಿ ಜಾರುವುದು

**103.** 'ನಿಮ್ಮೊಡನಿದ್ದೂ' – ಈ ಪದವನ್ನು ಬಿಡಿಸಿ ಬರೆಯಿರಿ.
(1) ನಿಮ್ಮೊಡ + ನಿದ್ದೂ
(2) ನಿಮ್ಮ + ಒಡನ್ + ಇದ್ದೂ
(3) ನಿಮ್ + ಒಡ + ನಿದ್ದೂ
(4) ನಿಮ್ಮ + ಒಡನಿದ್ದೂ

**104.** 'ಉನ್ಮತ್ತ' – ಈ ಪದದ ಅರ್ಥ :
(1) ಆವೇಶ
(2) ಅತಿ ಎತ್ತರ
(3) ಸಿಟ್ಟಾಗು
(4) ಬುದ್ಧಿ ಭ್ರಮಣೆ

105. ಮೊದಲನೆಯ ಕಡುಕಷ್ಟದ ಕೆಲಸ ಯಾವುದು ?

(1) ಪರಕೀಯನಾಗುವುದು

(2) ನಿಮ್ಮೊಡನೆ ಇದ್ದೂ ಇಲ್ಲದಂತೆ ಇರುವುದು

(3) ನನ್ನತನವಿದ್ದೂ ಪರಕೀಯನಂತೆ ಆಗುವುದು

(4) ಒಂಟಿಯಾಗಿ ಇರುವುದು

106. ಭಾಷಾ ಅಧ್ಯಾಪಿಕೆಯು ವಿದ್ಯಾರ್ಥಿಗಳಿಗೆ ಅವರ ಕಲಿಕೆಯ ಶೈಲಿ ಮತ್ತು ಆಯ್ಕೆಯನ್ನು ಅರಿಯಲು ಪ್ರಶ್ನಾವಳಿಗಳನ್ನು ಕೊಡುವಳು. ಇಲ್ಲಿ ಅಧ್ಯಾಪಿಕೆ ಈ ಪಾತ್ರ ವಹಿಸುತ್ತಿದ್ದಾಳೆ :

(1) ಪರಿಣಿತ ಮಾಹಿತಿ ಕೊಡುವವ

(2) ಕಂಡುಹಿಡಿಯುವವನು (Diagnotician)

(3) ಮ್ಯಾನೇಜರ್

(4) ಪ್ಲಾನರ್

107. **ಹೇಳಿಕೆ (A) :** ತರಗತಿಯಲ್ಲಿನ ವಿದ್ಯಾರ್ಥಿಗಳ ಕಲಿಕೆಯ ಅನುಭವಗಳು ಮಕ್ಕಳ ಜೀವನ ಹಾಗೂ ಅವರ ಸಂದರ್ಭಕ್ಕೆ ಆಳವಾಗಿ ಸಂಬಂಧಿತವಾಗಿದೆ.

**ಕಾರಣ (R) :** ಮಕ್ಕಳ ಹಿಂದಿನ ತಿಳುವಳಿಕೆಯ ಮೇಲೆ ಕಲಿಕೆಯ ಅನುಭವಗಳನ್ನು ರೂಪಿಸಲಾಗಿರುತ್ತದೆ.

ಈ ಕೆಳಗಿನವುಗಳಲ್ಲಿ **ಸರಿಯಾದ** ಉತ್ತರವನ್ನು ಆಯ್ಕೆ ಮಾಡಿ.

(1) **(A)** ಸರಿ ಇದೆ, ಆದರೆ **(R)** ತಪ್ಪು.

(2) **(A)** ತಪ್ಪು, ಆದರೆ **(R)** ಸರಿ ಇದೆ.

(3) **(A)** ಮತ್ತು **(R)** ಎರಡೂ ಸರಿ, ಮತ್ತು **(R)** ಅನ್ನುವುದು **(A)**ಯ ಸರಿಯಾದ ಹೇಳಿಕೆಯಾಗಿದೆ.

(4) **(A)** ಮತ್ತು **(R)** ಎರಡೂ ಸರಿ, ಆದರೆ **(R)** ಅನ್ನುವುದು **(A)**ಯ ಸರಿಯಾದ ವಿವರಣೆ ಅಲ್ಲ.

108. ಭಾಷಾ ಕಲಿಕೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಸರಿ ಅಲ್ಲ ?

(1) ಭಾಷಾ ಕಲಿಕೆಯು ಅರ್ಥವನ್ನು ಸ್ಪಷ್ಟಿಸುವಂಥದ್ದು

(2) ಭಾಷಾ ಕಲಿಕೆಗೆ ವ್ಯಾಕರಣ ಕಲಿಕೆ ಅನಿವಾರ್ಯ

(3) ಎಲ್ಲ ಕಲಿಕಾದಾರರು ಭಾಷೆಯ ಜೊತೆಗೆ ಸಾಕಷ್ಟು ರೂಢಿ ಮಾಡಿಕೊಳ್ಳುವ ಪ್ರಸಂಗ ಸೃಜಿಸಿದರೆ ಭಾಷೆಯನ್ನು ಕಲಿಯಬಲ್ಲರು

(4) ಭಾಷಾ ಕಲಿಕೆಗೆ ಸಮಯ ಹಿಡಿಯುತ್ತದೆ

109. **ಸಮರ್ಥನೆ (A) :** ಭಾಷೆಯು ಸಾಂಸ್ಕೃತಿಕ ತಿಳುವಳಿಕೆಯ ಮತ್ತು ಅಭಿವ್ಯಕ್ತಿಯ ಮುಖ್ಯವಾದ ಭಾಗವಾಗಿದೆ. ಮಕ್ಕಳ ಸಾಮರ್ಥ್ಯ ಬೆಳವಣಿಗೆಯಲ್ಲಿ ಇದು ಬಹುಮುಖ್ಯವಾದ ಸಾಮರ್ಥ್ಯವೆಂದೆ ತಿಳಿಯಲಾಗಿದೆ.

**ಕಾರಣ (R) :** ಸಾಂಸ್ಕೃತಿಕ ತಿಳುವಳಿಕೆ ಮತ್ತು ಅಭಿವ್ಯಕ್ತಿಗಳ ಸಾಮರ್ಥ್ಯವು ಮಕ್ಕಳಲ್ಲಿ ಒಂದು ಬಗೆಯ ಗುರುತು, ತಮ್ಮದೆನ್ನುವ ಅಂಶವನ್ನು ರೂಪಿಸುತ್ತವೆ ಮತ್ತು ದೇಶೀಯ ಸಂಸ್ಕೃತಿ ಮತ್ತು ಚಹರೆಗಳನ್ನು ಶ್ಲಾಘಿಸುವಂತೆ ಮಾಡುತ್ತವೆ.

ಈ ಕೆಳಗಿನವುಗಳಲ್ಲಿ ಅತೀ **ಸರಿಯಾದುದನ್ನು** ಆರಿಸಿ.

(1) **(A)** ಸರಿಯಾಗಿದೆ, ಆದರೆ **(R)** ತಪ್ಪು.

(2) **(A)** ತಪ್ಪು, ಆದರೆ **(R)** ಸರಿಯಾಗಿದೆ.

(3) **(A)** ಮತ್ತು **(R)** ಎರಡೂ ಸರಿ, ಮತ್ತು **(R)** ಅನ್ನುವುದು **(A)** ಯ ಸರಿಯಾದ ವಿವರಣೆ.

(4) **(A)** ಮತ್ತು **(R)** ಎರಡೂ ಸರಿ, ಆದರೆ **(R)** ಅನ್ನುವುದು **(A)** ಯ ಸರಿಯಾದ ವಿವರಣೆ ಅಲ್ಲ.

Prepp
Your Personal Exams Guide

**110.** **ಹೇಳಿಕೆ (A) :** ವಿದ್ಯಾರ್ಥಿಯ 'ಪೋರ್ಟ್‌ಫೋಲಿಯೊ' ವಿದ್ಯಾರ್ಥಿಯ ಕೆಲಸದ ಉದ್ದೇಶಪೂರ್ವಕ ಸಂಗ್ರಹದ ವಿಭಾಗವಾಗಿದೆ.
**ಕಾರಣ (R) :** ವಿದ್ಯಾರ್ಥಿಯ ಕೆಲಸ ಕುರಿತ 'ಪೋರ್ಟ್‌ಫೋಲಿಯೊ' ವಿದ್ಯಾರ್ಥಿಯು ತನ್ನ ಓದುವಿಕೆಯ ಬಲ ಮತ್ತು ಶಕ್ತಿಹೀನತೆಯನ್ನು ಮೌಲ್ಯಮಾಪನ ಮಾಡಿಕೊಳ್ಳಲು ಸಹಾಯ ಮಾಡುತ್ತವೆ.

ಈ ಕೆಳಗಿನವುಗಳಲ್ಲಿ **ಸರಿಯಾದ** ಉತ್ತರವನ್ನು ಆಯ್ಕೆ ಮಾಡಿ.

(1) **(A)** ಸರಿ ಇದೆ, ಆದರೆ **(R)** ತಪ್ಪು.
(2) **(A)** ತಪ್ಪು, ಆದರೆ **(R)** ಸರಿ ಇದೆ.
(3) **(A)** ಮತ್ತು **(R)** ಎರಡೂ ಸರಿ, ಮತ್ತು **(R)** ಅನ್ನುವುದು **(A)** ಯ ಸರಿಯಾದ ವಿವರಣೆಯಾಗಿದೆ.
(4) **(A)** ಮತ್ತು **(R)** ಎರಡೂ ಸರಿ, ಆದರೆ **(R)** ಅನ್ನುವುದು **(A)** ಯ ಸರಿಯಾದ ವಿವರಣೆ ಅಲ್ಲ.

**111.** ಬರಹಗಾರರು ಬರೆದ ಕಥೆಗಳು, ಕವನಗಳು, ನಾಟಕಗಳು ಮತ್ತು ಉಳಿದ ಬರಹಗಳನ್ನು ಪಠ್ಯಪುಸ್ತಕಗಳು ಒಳಗೊಂಡಿರುತ್ತವೆ. ಇಂಥ ಸಾಮಗ್ರಿಗಳಲ್ಲಿ ನಾವು ಆಯ್ಕೆಯನ್ನು ಮಾಡಿಕೊಳ್ಳಬೇಕು. ಏಕೆಂದರೆ ಅವುಗಳು :

(1) ಪ್ರಸಿದ್ಧ ಬರಹಗಾರರಿಂದ ಬರೆದವುಗಳು
(2) ಅವು ಸರಳ ಭಾಷೆಯಲ್ಲಿ ಇರುತ್ತವೆ
(3) ಅಥೆಂಟಿಕ್ ಮತ್ತು ಸಹಜ ಭಾಷೆಯಲ್ಲಿ ಇರುತ್ತವೆ
(4) ಪಠ್ಯಪುಸ್ತಕದಲ್ಲಿ ಬಳಸುವುದಕ್ಕೋಸ್ಕರವೇ ಬರೆದವುಗಳು

**112.** ಈ ಕೆಳಗಿನವುಗಳಲ್ಲಿ ಯಾವುದು ಓದುವ ಉಪಕೌಶಲ್ಯ ಅಲ್ಲ ?

(1) ನಿರ್ದಿಷ್ಟವಾದ ಬೇಕಾದ ಮಾಹಿತಿಯನ್ನು ವೇಗವಾಗಿ ಹುಡುಕುವುದು
(2) ಪ್ರತಿ ಪದದ ಉಚ್ಚಾರವನ್ನು ತಿಳಿಯುವುದು
(3) ಶಬ್ದ ಸಂಪತ್ತು ಅರಿಯುವುದು, ಪ್ರಮುಖ ಶಬ್ದಗಳನ್ನು ಹುಡುಕುವುದು
(4) ಬಳಕೆಯಲ್ಲಿರದ ನಿಘಂಟಿನ ಶಬ್ದಗಳ ಅರ್ಥಗಳನ್ನು ಹುಡುಕಿ ಅವುಗಳನ್ನು ಬಳಸುವುದು

**113.** ಭಾಷೆಯ ಬೆಳವಣಿಗೆಯನ್ನು ಕುರಿತು ಜ್ಞಾನಾತ್ಮಕ ತತ್ವ (cognative) ವು ಭಾಷೆಯನ್ನು ಕುರಿತು ಹೀಗೆ ಹೇಳುತ್ತದೆ :

(1) ಸಮಾಜದಲ್ಲಿ ಸಂವಹನದ ಮೂಲಕ ಕಲಿಯುವಂತದ್ದು
(2) ಮಾತನಾಡುವ ಮುನ್ನ, ಈ ಕುರಿತು ಮಗುವಿನ ಪರಿಕಲ್ಪನಾತ್ಮಕ ತಿಳುವಳಿಕೆ ಮೇಲೆ ಅದು ಆಧಾರಿತ
(3) ಅದು ವ್ಯಕ್ತಿಯ ಅಂತಸ್ಥ ಸಾಮರ್ಥ್ಯ
(4) ಬಹುಮಾನ – ಶಿಕ್ಷೆಯ ಕ್ರಿಯೆಯ ಮೂಲಕ ಕಲಿಯುವಂತದ್ದು

**114.** ಈ ಕೆಳಗಿನವುಗಳಲ್ಲಿ ಚಿತ್ರಗಳಿಗೆ ಸಂಬಂಧಿಸಿದಂತೆ ಯಾವುದು ಸರಿ ಅಲ್ಲ ?
ಪುಸ್ತಕದಲ್ಲಿ ಚಿತ್ರಗಳು ಮತ್ತು ಉದಾಹರಣೆಗಳು –

(1) ಇಂಥ ಚಿತ್ರಗಳನ್ನು ಬರೆಯಲು ಅವಕಾಶವನ್ನು ಒದಗಿಸುತ್ತವೆ
(2) ಅಪರಿಚಿತ ಮತ್ತು ನೆನಪಿಡುವ ಸಂದರ್ಭಗಳಲ್ಲಿ ಭಾಷೆಯನ್ನು ಬೆಳೆಸಲು ಸಹಾಯ ಮಾಡುತ್ತವೆ
(3) ವಸ್ತುವನ್ನು ವಿವರಿಸಲು ಪೋಷಿಸುತ್ತವೆ
(4) ಮಕ್ಕಳಲ್ಲಿ ಆಸಕ್ತಿಯನ್ನು ಉಳಿಸುತ್ತವೆ

**115.** ತರುಣ (Young) ಕಲಿಯುವವನಿಗೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು **ಸರಿ** ?

(1) ತಾರುಣ್ಯದ ಕಲಿಕೆಯವರು ಅಮೂರ್ತ ತತ್ವಗಳನ್ನು ಪಾರ್ಶ್ವಿಕವಾಗಿ ತಿಳಿಯುವರು
(2) ತಾರುಣ್ಯದ ಕಲಿಯುವವರು ಅಮೂರ್ತ ತತ್ವಗಳಿಂದ ಉತ್ತೇಜನಗೊಳ್ಳುವರು
(3) ತರುಣ ಕಲಿಯುವವರು ಅಮೂರ್ತ ತತ್ವಗಳನ್ನು ಅರಿಯಬಲ್ಲರು
(4) ತರುಣ ಕಲಿಯುವವರು ಅಮೂರ್ತ ತತ್ವಗಳನ್ನು ಅರಿಯಲು ಕಷ್ಟಪಡುವರು

Prepp
Your Personal Exams Guide

**116.** ಒಂದನೆಯ ತರಗತಿಯ ಮಕ್ಕಳಿಗೆ ಶಿಕ್ಷಕಿಯು ಗೋಡೆಯ ಮೇಲೆ ಬರೆಯುವುದು, ಗೀಚುವುದು–ಹೀಗೆ ಏನಾದರೂ ಮಾಡಲು ಹೇಳುತ್ತಾಳೆ. ಅವಳು ಏನನ್ನು ಉತ್ತೇಜನ ಕೊಡುತ್ತಿದ್ದಾಳೆ ?

(1) ಬರವಣಿಗೆಯ ಕೌಶಲ್ಯದ ಅಭಿವೃದ್ಧಿ
(2) ಅಕ್ಷರಗಳ ಬರವಣಿಗೆಯ ಬುನಾದಿ
(3) ಬೆಳೆಯುವ ಸಾಕ್ಷರತಾ ಅಭಿವೃದ್ಧಿ
(4) ಆನಂದ ಮತ್ತು ವಿನೋದ

**117.** ಭಾಷಾ ಕಲಿಕೆಯ ಕೆಲವು ಆಯಾಮಗಳನ್ನು ಶಿಕ್ಷಕಿ ಹುಡುಕಿದ್ದಾಳೆ.

ಉದಾಹರಣೆಗೆ : ವೈಜ್ಞಾನಿಕ ತತ್ವಗಳ ಮೇಲೆ ಇರುವ ಪಠ್ಯವನ್ನು ಅರಿತು ಓದುವುದು. ಈ ಒಂದು ಅಂಶದಲ್ಲಿ ಕಲಿಯಲು ಕಷ್ಟ ಪಡುವ ವಿದ್ಯಾರ್ಥಿಗಳನ್ನು ಅವಳು ಆಯ್ಕೆ ಮಾಡುವಳು. ಅವರಿಗೆ ಅವಳು ಪ್ರತ್ಯೇಕವಾದ ಪಾಠವನ್ನು ಮಾಡಿ ತತ್ವವನ್ನು ತಿಳಿಯುವಂತೆ ಮಾಡುವಳು. ಈ ಅಭ್ಯಾಸವನ್ನು ಏನೆಂದು ಕರೆಯುತ್ತಾರೆ ?

(1) ಯೋಚನೆ ಮಾಡಲು ಹಚ್ಚುವ ಕೌಶಲ್ಯಗಳು
(2) ತಿರುಗಿ ಮನನ ಮಾಡುವ ಕಲಿಸುವಿಕೆ (Feedback teaching)
(3) ಪರಿಹಾರಾತ್ಮಕ ಕಲಿಸುವಿಕೆ (Remedial Teaching)
(4) ಉನ್ನತಮಟ್ಟದ ಕೌಶಲ್ಯಗಳು

**118.** ಅಂಗಡಿಯಲ್ಲಿ ವಸ್ತುವನ್ನು ಕೊಳ್ಳಲು ವಿದ್ಯಾರ್ಥಿಗಳು ಕ್ರಿಯಾತ್ಮಕವಾದ ಬಾಹ್ಯ ಅನುಭವವನ್ನು ಉಪಯೋಗಿಸಬಲ್ಲರು ಎನ್ನುವುದನ್ನು ತಿಳಿಯಲು ವಿದ್ಯಾರ್ಥಿಗಳು ಇದನ್ನು ಬಳಸುವುದು ಸರಿಯಾಗಿದೆ :

(1) ಅಂಗಡಿಯವನು ಮತ್ತು ಗ್ರಾಹಕರು ಇಬ್ಬರಿಗೂ ಸಣ್ಣಕಥೆ ಓದುವುದು
(2) ಅಂಗಡಿಯವನು ಮತ್ತು ಗ್ರಾಹಕರ ನಡುವಿನ ಘಟನೆಯನ್ನು ದೃಶ್ಯಾವಳಿ ಮಾಡುವುದು
(3) ಅಂಗಡಿಯವನು ಮತ್ತು ಗ್ರಾಹಕನ ನಡುವೆ ಸಣ್ಣ ಸಂಭಾಷಣೆ ಬರೆಯುವುದು
(4) ತಮ್ಮ ಆಹಾರದ ಆಯ್ಕೆಯನ್ನು ಕುರಿತು ಬರೆಯುವುದು

**119.** ನಿಮ್ಮ ತರಗತಿಯಲ್ಲಿ ಅಧ್ಯಾಪಕನಾಗಿ ವಿದ್ಯಾರ್ಥಿ ಪರಸ್ಪರ ಸಂವಹನಕ್ಕಾಗಿ ನೀವು ಏನು ಮಾಡುತ್ತೀರಿ ?

(a) ವಿದ್ಯಾರ್ಥಿಗೆ ಹೆಚ್ಚು ಪ್ರಶ್ನೆಗಳನ್ನು ಕೇಳಲು ಹೇಳುತ್ತೇವೆ
(b) ಜೋಡಿ ಮತ್ತು ಸಮೂಹ ಗುಂಪುಗಳನ್ನಾಗಿ ಮಾಡಿ, ವಿದ್ಯಾರ್ಥಿಗಳಿಂದ ಅಭಿಪ್ರಾಯ ಪಡೆಯುವುದು
(c) ಪಠ್ಯವನ್ನು ಜೋರಾಗಿ ಓದುವಂತೆ ಹೇಳುವುದು, ಮತ್ತು ವೈಯಕ್ತಿಕವಾಗಿ ಅದಕ್ಕೆ ಪ್ರತಿಕ್ರಿಯಿಸಲು ಹೇಳುವುದು ಈ ಮೂಲಕ ತ್ರೈಮಾಸಿಕ ಕಲಿಕೆ ಸಾಧ್ಯವಾಗುತ್ತದೆ.
(d) ಸಂಭಾಷಣೆಯನ್ನು ಪರಸ್ಪರ ಓದುವಂತೆ ಮತ್ತು ಪ್ರಶ್ನೆಗಳನ್ನು ಪರಸ್ಪರ ಕೇಳುವಂತೆ ಮಾಡುವುದು

(1) (a), (b), (d) ಇವು ಸರಿಯಾಗಿವೆ.
(2) (a), (c), (d) ಇವು ಸರಿಯಾಗಿವೆ.
(3) (a), (b), (c) ಮೂರೂ ಸರಿಯಾಗಿವೆ.
(4) (b), (c), (d) ಇವು ಸರಿಯಾಗಿವೆ.

**120.** ವಿದ್ಯಾರ್ಥಿಗಳಲ್ಲಿ ಶಬ್ದ ಸಂಪತ್ತು ಹೆಚ್ಚಿಸಲು, ಶಿಕ್ಷಕಿಯು ಭಾಷೆಯು ಇರುವ ಸಾಮಗ್ರಿಯನ್ನು ಬಳಸುವರು, ಇದು ವಿದ್ಯಾರ್ಥಿಗಳಿಗೆ ಸುಲಭವಾಗಿ ಇರುವಂತೆಯೂ ಮತ್ತು ಅಥೆಂಟಿಕ್ ಸಾಮಗ್ರಿಯೂ ಆಗಿರುವುದು.

ಆ ಸಾಮಗ್ರಿಯು :

(1) ದ್ವಿಭಾಷಿಕ ನಿಘಂಟುಗಳು
(2) ವಿಂಗಡಿಸಲಾದ ಓದಿಕೆಗಳು (Graded Readers)
(3) ದಿನಪತ್ರಿಕೆ
(4) ರೋಲ್ ಕಾರ್ಡುಗಳು

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು **(ಪ್ರಶ್ನೆ ಸಂಖ್ಯೆ 121-150)** ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

# PART–V
# LANGUAGE-II
# KANNADA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **121-150**) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಗ್ರೀಕ್ ಭಾಷೆಯಲ್ಲಿ ಮುಥೋಸ್ ಎನ್ನುವ ಪದವು ಚಾಲ್ತಿಯಲ್ಲಿ ಇದೆ. ಅದನ್ನು ಪುರಾಣಗಳಿಗೆ ಅನ್ವಯ ಮಾಡುತ್ತಾರೆ. ಮಿಥಾಲಜಿ ಎನ್ನುವುದನ್ನೇ ಮುಥೋಸ್ ಎಂದು ಕರೆಯುತ್ತಾರೆ. ಇದು ವಸ್ತುನಿಷ್ಠ ಸತ್ಯವನ್ನು ಹೇಳುವುದಿಲ್ಲ. ಸಮಾಜ ಮತ್ತು ಅದರ ಉಗಮವನ್ನು ಪುರಾಣದಲ್ಲಿ ಹುಡುಕುವ ಯತ್ನವನ್ನು ಇದು ಮಾಡುತ್ತದೆ. ಇದು ಸತ್ಯ ಕಥೆಯನ್ನು ಹೇಳದೆ ಇರುವುದರಿಂದ ಇದರ ಬಗ್ಗೆ ಕೆಲವು ವಾಗ್ವಾದಗಳೂ ಇವೆ. ಮಿಥೋಸ್ ಎಂದರೆ ಕಥನ ಮತ್ತು ವರದಿ ಎನ್ನುವ ಅರ್ಥವೂ ಇದೆ. ಕತೆಯನ್ನು ಹೇಳು ಎನ್ನುವುದು ಇದರ ಭಾವಾರ್ಥವಾಗಿದೆ. ಹಾಗೆಯೇ ಭಾಷಣ ಮತ್ತು ನಿರೂಪಣೆ ಎನ್ನುವುದನ್ನು ಇದು ಸೂಚಿಸುತ್ತದೆ. ಇದು ಒಂದು ಸಂಸ್ಕೃತಿಯ ನಂಬಿಕೆಯನ್ನು ಹೇಳುತ್ತದೆ. ಇದರಲ್ಲಿ ಅನೇಕ ಘಟನೆಗಳು ಇರುತ್ತವೆ. ಅದರಲ್ಲಿ ಭಿನ್ನತೆಗಳು ಇಲ್ಲ. ಯಾವುದನ್ನು ನಾವು ಕಥನ ಎಂದು ಹೇಳುತ್ತೇವೆಯೋ ಅದರಲ್ಲಿ ವಿವಿಧ ಘಟನೆಗಳು ಇರುತ್ತವೆ. ಅದಕ್ಕೆ ನಿಯಮಗಳು ಇರುತ್ತವೆ. ಆ ನಿಯಮವು ಸಾಹಿತ್ಯ ಮತ್ತು ಅದರ ಅಭಿವ್ಯಕ್ತಿಗೆ ಸಂಬಂಧಪಟ್ಟದ್ದೂ ಹೌದು. ಷಟ್ಪದಿ ಮತ್ತು ಚಂಪೂ ಕಾವ್ಯಗಳಲ್ಲಿ ಸಾಹಿತ್ಯ ಕಥನಗಳು ಇದ್ದವು. ಅವುಗಳಿಗೆ ಒಂದು ರೂಪವೂ ಇತ್ತು. ಅಪೂರ್ಣವಾದ ಕಥನ ಎನ್ನುವುದು ಇರಲಿಲ್ಲ. ಈಗಲೂ ನಾವು ಕತೆಯನ್ನು ಹೇಳುತ್ತೇವೆ. ಅದು ಅಪೂರ್ಣವಾಗಿದೆ ಎಂದು ಹೇಳಲಾಗುವುದಿಲ್ಲ. ಸಾಹಿತ್ಯ ಎಂದರೆ ಏನದು ಎನ್ನುವ ಪ್ರಶ್ನೆಯನ್ನು ಕೇಳಿದರೆ ಈವತ್ತು ಕೂಡಾ ನಾವು ಹಿಂದೆ ಏನು ಹೇಳಿದರೋ ಅದನ್ನೇ ಹೇಳುತ್ತೇವೆ. ವ್ಯಾಖ್ಯೆಗಳು ಹೆಚ್ಚು ಬದಲಾಗಿಲ್ಲ. ಸಾಹಿತ್ಯ ಪ್ರಕಾರಗಳು, ಸಾಹಿತ್ಯದ ರೂಪದ ಪ್ರಶ್ನೆಗಳಿಗೆ ನಾವು ಹಿಂದೆ ಏನು ಹೇಳಿದರೋ ಅದನ್ನೇ ಪ್ರತಿಪಾದಿಸುತ್ತೇವೆ. ಸ್ವಲ್ಪ ಬದಲಾವಣೆಯನ್ನು ಮಾಡಿದ್ದೇವೆ ಅಷ್ಟೇ. ಕೆಲವು ಸಾಹಿತ್ಯದ ರೂಪಗಳಿಗೆ ಹೆಚ್ಚು ಮನ್ನಣೆಯು ದೊರೆತಿದೆ. ಅದರಲ್ಲಿಯೂ ಈವತ್ತು ಕಾದಂಬರಿ ಪ್ರಕಾರವು ಹೆಚ್ಚು ಜನಪ್ರಿಯವಾಗಿದೆ. ಅದು ಆಧುನಿಕ ಕಾಲದ ಸೃಷ್ಟಿಯೂ ಹೌದು. ಹೊಸದಾದ ಸಾಮಾಜಿಕ ಸನ್ನಿವೇಶಕ್ಕೆ ಅನುಸಾರವಾಗಿ ಅದು ಇದೆ. ಅದರಲ್ಲಿ ನಾವು ನಮ್ಮ ಅನುಭವವನ್ನು ಹೇಳಬಹುದು. ಅದರ ಜೊತೆಗೆ ಅದರಲ್ಲಿ ನಮ್ಮ ಅಭಿವ್ಯಕ್ತಿಯನ್ನು ಸಾಧಿಸಬಹುದು. ಉಳಿದ ಪ್ರಕಾರಕ್ಕಿಂತ ಇದು ಭಿನ್ನವಾಗಿದೆ. ಕಾದಂಬರಿಯ ಸಂಯೋಜನೆಯು ಬೇರೆಯಾಗಿದೆ. ಕಾದಂಬರಿ ಮತ್ತು ಅದರ ಉದ್ದೇಶವೂ ಬೇರೆಯಾಗುತ್ತದೆ. ಬದಲಾಗುತ್ತಿರುವ ಸಮಾಜವನ್ನು ಹೇಳುವುದು ಭಿನ್ನವಾಗಿ ಸಮಾಜವು ಪಲ್ಲಟವಾಗುತ್ತಿದೆ ಎಂದು ಹೇಳಲು ಸಾಧ್ಯವಾಗುವುದು ಕೂಡಾ ಕಾದಂಬರಿಯಲ್ಲಿ, ಅದನ್ನು ನಾವು ಮುಸ್ಸಂಜೆಯ ಕಥಾ ಪ್ರಸಂಗದಲ್ಲಿ ಕಾಣುತ್ತೇವೆ. ಅದರಲ್ಲಿ ಮಹಾಕಾವ್ಯದ ಗುಣವಿದೆ., ಅದರಲ್ಲಿ ನಾಟಕದ ಅಂಶವೂ ಇದೆ. ಅದರಲ್ಲಿ ಅಭಿಜಾತ ಪರಂಪರೆಯು ಗುಣವೂ ಇದೆ. ಮುಸ್ಸಂಜೆಯ ಕಥಾ ಪ್ರಸಂಗದಲ್ಲಿ ನಾವು ಇದನ್ನು ಕಾಣುತ್ತೇವೆ. ಅರಿಸ್ಟಾಟಲನ ಪೊಯೆಟಿಕ್ಸ್ ಕೃತಿಯಲ್ಲಿ ಒಂದು ವಿಚಾರವು ಬರುತ್ತದೆ. ಅದು ಕ್ರಿಯೆ ಮತ್ತು ಅದರ ಐಕ್ಯತೆಯನ್ನು ಹೇಳುತ್ತದೆ. ನಿರೂಪಣೆಯ ದೃಷ್ಟಿಯಿಂದ ಇದು ಅತ್ಯಂತ ಮಹತ್ವದ್ದು. ಯಾವುದನ್ನು ನಾವು ಚಾರಿತ್ರಿಕವಾದ ಮಹಾಕಾವ್ಯ ಎಂದು ಹೇಳುತ್ತೇವೆಯೋ ಅದರಲ್ಲಿ ಕ್ರಿಯೆ, ಕಾಲ ಮತ್ತು ವಸ್ತುವಿನ ಏಕತೆಯನ್ನು ನಾವು ಕಾಣುತ್ತೇವೆ. ಅವುಗಳಲ್ಲಿ ಕಾಲವು ಅತ್ಯಂತ ವಿಸ್ತಾರವಾಗಿರುತ್ತದೆ. ಕೃತಿಯ ಒಳಗಿನ ಕಾಲ ಮತ್ತು ಅದರ ನಿರೂಪಣೆಗೆ ಒಂದು ಸಂಬಂಧವು ಇದೆ.

ಚರಿತ್ರೆಯಲ್ಲಿ ನಾವು ಕೆಲವು ಪ್ರಾಚೀನ ಮಾದರಿಗಳನ್ನು ಕಾಣಬಹುದು. ಇದನ್ನು ಫ್ರೈ ಎನ್ನುವ ಚಿಂತಕ ಪ್ರಾಗ್ರೂಪ ಎಂದು ಕರೆಯುತ್ತಾನೆ. ವಿಶ್ವದ ಸಂಗತಿಗಳು ಎಲ್ಲಾ ಕಡೆಗೆ ಒಂದೇ ರೀತಿಯಲ್ಲಿ ಇರುತ್ತದೆ. ಯಾವುದನ್ನು ಅವನು ನಿಯಮ ಬದ್ಧವಾದ ರೂಪಗಳು ಎಂದು ಹೇಳುತ್ತಾನೆಯೋ ಅದರಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸಗಳು ಇರುತ್ತವೆ. ಜಗತ್ತಿನಲ್ಲಿ ಕೆಲವು ವಿಚಾರಗಳ ನಿರೂಪಣೆಯು ಒಂದೇ ರೀತಿಯಲ್ಲಿ ಇರುತ್ತವೆ. ಕಥನವನ್ನು ನಾವು ಒಂದೇ ಚಹರೆಯಲ್ಲಿ ಗುರುತಿಸುತ್ತೇವೆ. ಅದೇ ರೀತಿಯಲ್ಲಿ ಹಾಡುಗಳು ಕೂಡ ಒಂದು ಮಾದರಿಯಲ್ಲಿ ಇರುತ್ತದೆ. ನಾಟಕವು ದೃಶ್ಯಾತ್ಮಕವಾದ ಕಲೆಯು ಆಗಿದ್ದು, ಅದರಲ್ಲಿ ಹೆಚ್ಚು ಭಿನ್ನತೆಗಳಿರುವುದು ಸಾಧ್ಯವಿಲ್ಲ. ಇದಕ್ಕೆ ಕಾರಣವೂ ಸ್ಪಷ್ಟ. ಚರಿತ್ರೆಯು ಇದನ್ನು ಹೇಳುತ್ತದೆ. ಕಥನಗಳು ಮತ್ತು ಕಾದಂಬರಿಗಳು ಹಾಗೂ ಅವುಗಳ ಬೇರೆ ಬೇರೆ ಮಾದರಿಗಳು ಒಂದೇ ಮೂಲದಿಂದ ಬಂದಿರುತ್ತವೆ.

Prepp
Your Personal Exams Guide

**121.** 'ಮುಸ್ಸಂಜೆಯ ಕಥಾ ಪ್ರಸಂಗ'ವನ್ನು ಬರೆದವರು :

(1) ಅನಕೃ (2) ಅನಂತಮೂರ್ತಿ

(3) ಶಿವರಾಮಕಾರಂತ (4) ಪಿ. ಲಂಕೇಶ

**122.** ನಾಟಕಕ್ಕೆ 'ಪ್ರಾಚೀನ ಮಾದರಿ'ಯ ಪರಿಕಲ್ಪನೆಯು ಅನ್ವಯವಾಗುತ್ತದೆಯೇ ?

(1) ಕೆಲವು ಬಾರಿ ಆಗುತ್ತದೆ (2) ನಿಯತವಾಗಿ ಅಲ್ಲ

(3) ಅನ್ವಯವಾಗುವುದಿಲ್ಲ (4) ಅನ್ವಯವಾಗುತ್ತದೆ

**123.** 'ಅಭಿಜಾತ'–ಈ ಪದದ ಮೂಲ ಯಾವುದು ?

(1) ಪರ್ಶಿಯನ್ (2) ಕನ್ನಡ (3) ಸಂಸ್ಕೃತ (4) ಹಿಂದಿ

**124.** 'ಪ್ರತಿಪಾದಿಸು' – ಈ ಪದದ ಅರ್ಥ :

(1) ನಿಶ್ಚಯಿಸು (2) ಪ್ರಚುರ ಪಡಿಸು

(3) ವಾದಿಸು (4) ಉಲ್ಲೇಖಿಸು

**125.** ಪುರಾಣದ ಕಥನದ ಶೈಲಿಯು ಯಾವುದಕ್ಕೆ ಅನ್ವಯ ಎಂದು ಇಲ್ಲಿ ಹೇಳಲಾಗಿದೆ ?

(1) ಗಮಕ ಮಾಡಲು (2) ಸಾಹಿತ್ಯ–ಅಭಿವ್ಯಕ್ತಿ

(3) ಧಾರ್ಮಿಕ ಆಚರಣೆಯಲ್ಲಿ ಬಳಕೆ (4) ಕಥೆ ಪುರಾಣ ಹೇಳಲು

**126.** ಆಧುನಿಕ ಕಾಲದ ಪುರಾಣವೆಂದು ಯಾವುದನ್ನು ಕರೆಯುತ್ತಾರೆ ?

(1) ಕಾದಂಬರಿ (2) ಕಾವ್ಯ (3) ಸಿನಿಮಾ (4) ಕಥೆ

**127.** ಮಿಥಾಲಜಿಯನ್ನು ಕನ್ನಡದಲ್ಲಿ ಏನೆಂದು ಕರೆಯುತ್ತಾರೆ ?

(1) ದಂತಕಥೆ (2) ಧಾರ್ಮಿಕ ಕಥೆ (3) ಕಥನ (4) ಪುರಾಣ

**128.** ಪುರಾಣಗಳು ಏನನ್ನು ಹೇಳುತ್ತವೆ ?

(1) ಕಾಲ್ಪನಿಕ ಕಥೆಗಳನ್ನು (2) ರಮ್ಯ ಶೈಲಿಯ ಕಥೆಯನ್ನು

(3) ಸಂಸ್ಕೃತಿಯ ನಂಬಿಕೆಯನ್ನು (4) ಮನುಷ್ಯರ ಕಥೆಗಳನ್ನು

Prepp
Your Personal Exams Guide

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129-135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಇನ್ನೂ ಕತ್ತಲು ಪೂರ್ತಿ ಕರಗಿರಲಿಲ್ಲ, ಪಾಟೀಲರು ನಿಧಾನವಾಗಿ ಕೋಣೆಯಿಂದ ಪಡಸಾಲೆಗೆ ಬಂದು ಕುರ್ಚಿಯಲ್ಲಿ ಕುಳಿತರು. ಬದಿಯ ಟೇಬಲಿನ ಮೇಲೆ ಜೇನುತುಪ್ಪ, ನಿಂಬೇರಸ ಬೆರೆಸಿದ ಪಾನಕ ತುಂಬಿದ್ದ ತಂಬಿಗೆಯಿತ್ತು. ರೂಢಿಯಂತೆ ಎತ್ತಿಕೊಂಡು ಕುಡಿಯತೊಡಗಿದರು. ಒಂದೆರಡು ಗುಟುಕು ಕುಡಿದಿರಬೇಕು. ರುಚಿಗೆ ಮನಸ್ಸು ಉತ್ಸಾಹಗೊಂಡಿತು. ಹತ್ತಾರು ವರ್ಷಗಳಿಂದ ಆಪ್ತರಾಗಿದ್ದ ಆಯುರ್ವೇದ ವೈದ್ಯರೊಬ್ಬರು ಇಂಥ ಪಾನಕ ಕುಡಿಯಲು ಹೇಳುತ್ತಲೇ ಇದ್ದರು. ಆದರೆ ಮುಂಜಾನೆ ಎದ್ದರೆ ಸಾಕು ಮನಸ್ಸು ಚಹಾಕ್ಕೆ ಹಾತೊರೆಯುತ್ತಿತ್ತು. ಚಹ ಕುಡಿದರೆ ಮಾತ್ರ ಸಮಾಧಾನವಾಗುತ್ತಿತ್ತು. ಒಂದೆರಡು ಸಲ ಪಾನಕ ಕುಡಿಯಲು ಯತ್ನಿಸಿ ಕುಡಿದರೂ, ಪುನಃ ಚಹ ಕುಡಿಯುವ ತನಕ ಮನಸ್ಸಿಗೆ ನೆಮ್ಮದಿಯಾಗಿರಲಿಲ್ಲ! ಹೀಗಾಗಿ ಜೇನುತುಪ್ಪ ನಿಂಬೇರಸದ ಪಾನಕ ಕುಡಿಯಬೇಕೆಂಬ ಪ್ರಯತ್ನ ಕೈಬಿಟ್ಟಿದ್ದರು. ಪಾಟೀಲರು ಈ ಮನೆಗೆ ಬಂದು ಒಂದು ವಾರ ಕಳೆದಿತ್ತು. ಇಲ್ಲಿ ಪಾನಕ ಕುಡಿಯುವುದು ಅನಿವಾರ್ಯವಾಗಿ ರೂಢಿಯಾಗಿತ್ತು. ಈಗ ಪಾನಕ ಕುಡಿಯುತ್ತಿದ್ದರೆ ತನು ಮನಕ್ಕೆ ಹಿತವಾಗುತ್ತಿತ್ತು. ಪಾನಕವನ್ನು ಸವಿಯತೊಡಗಿದ್ದರು. ಕಳೆದ ಹದಿನೈದು ವರ್ಷಗಳಿಂದ ಜೀವಕ್ಕೆ ನೆಮ್ಮದಿ ಸಿಕ್ಕಿದ್ದು ಏನಾದರು ಇದ್ದರೆ ಅದು ಕಳೆದ ಈ ವಾರ–ಹತ್ತು ದಿನಗಳಲ್ಲಿ ಮಾತ್ರ ಎಂದು ಎನ್ನಿಸತೊಡಗಿತು. ಈ ಮನೆಯ ಸಿದ್ರಾಮಪ್ಪ ಮಾಸ್ತರ, ಹೆಂಡತಿ ಅಮರಮ್ಮ ದಂಪತಿಗಳು ಬದುಕುತ್ತಿರುವ ವಿಧಾನ ಕಂಡು ಪರಮಾಶ್ಚರ್ಯವಾಗಿತ್ತು. ಪಾಟೀಲರಿಗೆ. ಈ ಒಂಟಿ ಮನೆಗೆ ಬಂದ ದಿನ ರಾತ್ರಿವಾಸದ ಅನುಭವದಿಂದ, ಯಾವ ಶಿಕ್ಷೆಯ ಪರಿಣಾಮವಾಗಿ ಈ ದಂಪತಿಗಳು ಈ ರೀತಿಯಲ್ಲಿ ಜೀವಿಸುತ್ತಿದ್ದಾರೆ ಎಂದು ಅನ್ನಿಸಿ ಪಾಟೀಲರಿಗೆ ಬೇಸರವಾದದ್ದು ನಿಜ ಆದರೆ ಮೂರು ದಿನ ಕಳೆಯುವ ಹೊತ್ತಿಗೆ 'ಆಹ್ವಾ! ಅನ್ನಿಸಿಬಿಟ್ಟಿತು. ಮಾಸ್ತಾರರು ಕುಟುಂಬದ ಜತೆಗೆ ಮಾಡುತ್ತಿದ್ದ ನಿತ್ಯದ ಕೆಲಸಗಳನ್ನು ನೋಡುತ್ತಿದ್ದರೆ, ಮಕ್ಕಳು ಕೂಡಿಕೊಂಡು ಗಂಡ–ಹೆಂಡತಿಯ ಸಂಸಾರದ ಆಟ ಆಡುತ್ತವಲ್ಲ .... ಅದನ್ನು ಕಂಡಂತಿತ್ತು. ಮಾಸ್ತಾರರೇ ಹುಟ್ಟಿ ಬೆಳೆದ ಈ ಊರಲ್ಲಿ ಇರದೆ ಇದೇ ಊರಿನ ಹೊರಗೆ ಹೊಲದಲ್ಲಿ ಮನೆ ಕಟ್ಟಿಕೊಂಡು ಇದ್ದರು. ಹೊತ್ತು ಮುಳುಗಿದ ಬೆನ್ನಲ್ಲೇ ಉಣ್ಣುವುದು, ಉಂಡು ಕಂದೀಲು ಬೆಳಕಿನಲ್ಲಿ ಕುಳಿತು ಮಾತುಕತೆಯಾಡುವುದು, ಮನೆಯ ಹೊರಗೆ ಬೆಳದಿಂಗಳಲ್ಲಿ ಸುತ್ತಾಡಿ ಬಂದು ಮಲಗುವುದು. ಬೆಳಗಾಗುವ ಮುನ್ನವೇ ಏಳುವುದು, ಕಟ್ಟಿಕೊಂಡಿರುವ ಆಕಳು, ಅದರ ಅಂಕಣವನ್ನು ಹಸನ ಮಾಡುವುದು, ಹಾಲು ಹಿಂಡಿಕೊಳ್ಳುವುದು, ಮನೆಯ ಸುತ್ತಮುತ್ತಲಿನ ತೋಟವನ್ನು ಸುತ್ತಾಡಿ ಆರೈಕೆ ಮಾಡುವುದು, ಪಕ್ಕದ ಕಾಲುವೆಯಲ್ಲಿ ಬಟ್ಟೆಬರೆ ಒಗೆಯುವುದು ಒಂದೇ ಎರಡೇ ಇಂಥ ಹಲವು ಕೆಲಸಗಳನ್ನು ದಣಿವಿಲ್ಲದೆ, ಬೇಸರಿಸದೆ ಇಬ್ಬರು ಕೂಡಿಯೇ ಮಾಡುವುದನ್ನು ಪಾಟೀಲರು ಕಂಡು ತಾವು ಕೈ ಜೋಡಿಸಲು ಹಂಬಲಿಸಿದರು. ಮೊನ್ನೆ ಮಾಸ್ತಾರರು ಕಾಲುವೆಯಲ್ಲಿ ಬಟ್ಟೆ ಒಗೆಯುತ್ತಿದ್ದಾಗ ಹೆಂಡತಿಯ ಸೀರೆ ಬಟ್ಟೆಗಳೂ ಕಂಡು ತಡೆಯಲಾರದೆ ಪಾಟೀಲರು, 'ಸಿದ್ರಾಮು, ಸೀರೆ ಒಗೆಯುವುದು ನಿನಗೆ ಹೇಗೆ ಸಾಧ್ಯವಾಯ್ತು ? ಅದಕ್ಕೂ ಮಾನಸಿಕ ಸಿದ್ಧತೆ ಬೇಕಲ್ಲ ? ತಪ್ಪು ತಿಳಿಯಬಾರದು.....' ಎಂಬ ಮಾತು ಮುಗಿಯುವ ಮುನ್ನವೇ, ತಪ್ಪಾಕ ತಿಳಿಲಿ ಬಿಡು, ನಾನು ಉಡುವುದು ಪಂಜೆ, ಆಕೆ ಉಡುವುದು ಸೀರೆ, ಅವೆಲ್ಲ ಬಟ್ಟೆಗಳಲ್ಲೇನಪ್ಪ ? ಬಟ್ಟೆಗಳಂತ ಒಗಿತೀನಿ ಅಷ್ಟೆ! ಎಂದು ಮಾಸ್ತರರು ತಣ್ಣಗೆ ಅಂದಿದ್ದರು. ಮಾತು ಪಾಟೀಲರಿಗೆ ತಗುಲಿತು. ತಮ್ಮ ಹೆಂಡತಿಯನ್ನು ನೆನಪಿಸಿಕೊಂಡಿದ್ದರು. ಬಾತ್ ರೂಮಿಗೆ ಸ್ನಾನಕ್ಕೆ ಹೋದಾಗ, ಅಲ್ಲೇನಾದರೂ ಹೆಂಡತಿಯ ಬಟ್ಟೆ ಬರೆ ಕಾಣಿಸಿದರೆ ಸಿಡಿಮಿಡಿಯಾಗುತ್ತಿತ್ತು. ಅದನ್ನು ಪಾಟೀಲರು ಕಣ್ಣ ಮುಂದೆ ತಂದುಕೊಂಡರು...

"ನಿಮ್ಗ ಈ ಪಾನಕ ಬ್ಯಾಡನಿಸಿದರೆ ಬುಟ್ಟು ಬುಡ್ರಿ, ಹಾಲು ತಂದು ಕೊಡ್ತೀನಿ" ಅಂದಳು. ಅಡಿಗೆ ಮನೆಯಿಂದ ಪಡಸಾಲೆಗೆ ಬಂದ ಅಮರಮ್ಮ, ಏನನ್ನೋ ನೆನೆಯುತ್ತ ಕೈಯಲ್ಲಿ ಪಾನಕದ ತಂಬಿಗೆ ಹಿಡಿದು ಕುಳಿತಿದ್ದ ಪಾಟೀಲರನ್ನು ಅನುಮಾನಿಸಿ ಕೇಳಿದ್ದಳು.

**129.** 'ಅವೆಲ್ಲ ಬಟ್ಟೆಗಳಲ್ಲವೇನಪ್ಪ, ಬಟ್ಟೆಗಳಂತ ಒಗಿತೀನಿ' ಈ ಮಾತು ಮತ್ತು ಕ್ರಿಯೆಯ ಹಿಂದೆ ಬರುವ ಭಾವ :

(1) ಮೇಲು ಕೀಳು ಮಾಡಬಾರದು
(2) ಬಟ್ಟೆಗಳು ಒಂದೇ ರೀತಿಯವು
(3) ಬಟ್ಟೆಗಳಲ್ಲಿ ವ್ಯತ್ಯಾಸವಿಲ್ಲ
(4) ಎಲ್ಲರೂ ಸಮಾನರು

**130.** ಪಾಟೀಲರು ಸ್ಥಂಭೀಭೂತರಾದದ್ದು ಯಾವಾಗ ?

(1) ಬಟ್ಟೆ ಒಗೆಯುವ ಸಿದ್ರಾಮಪ್ಪನ ನೋಡಿ
(2) ಸಿದ್ರಾಮಪ್ಪನ ಅಡಿಗೆಮನೆ ಕೆಲಸವನ್ನು ನೋಡಿ
(3) ಸಿದ್ರಾಮಪ್ಪ ಹೆಂಡತಿಯ ಸೀರೆಯನ್ನು ಒಗೆಯತೊಡಗಿದಾಗ
(4) ಹೆಣ್ಣುಮಕ್ಕಳ ಬಟ್ಟೆಯನ್ನು ಸಿದ್ರಾಮಪ್ಪನ ಒಗೆಯತೊಡಗಿದಾಗ

Prepp
Your Personal Exams Guide

131. 'ಕತ್ತಲು ಕರಗು' – ಈ ನುಡಿಗಟ್ಟಿನ ಅರ್ಥವೇನು ?

(1) ಸಂಜೆಯಾಗು
(2) ಬೆಳಗಾಗು
(3) ದಟ್ಟ ರಾತ್ರಿ
(4) ಪ್ರಖರ ಬೆಳಕು

132. 'ಸಿಡಿ–ಮಿಡಿ' – ಈ ಪದಗಳನ್ನು ಏನೆಂದು ಕರೆಯುತ್ತಾರೆ ?

(1) ಜೋಡು ಪದಗಳು
(2) ದ್ವಿರುಕ್ತಿ ಪದಗಳು
(3) ಅನುರಣನ ಪದಗಳು
(4) ಅನುಕರಣ ಪದಗಳು

133. ಏನನ್ನು ನೋಡಿ ಪಾಟೀಲರ ಮನಸ್ಸು ಪರಿವರ್ತನೆ ಆಯಿತು ?

(1) ಸಿದ್ರಾಮಪ್ಪ ಮಾಸ್ತರ, ಅಮರಮ್ಮ ದಂಪತಿಗಳನ್ನು ನೋಡಿ
(2) ಸಿದ್ರಾಮಪ್ಪ ಅವರ ಹೆಂಡತಿಯ ಕೆಲಸವನ್ನು ನೋಡಿ
(3) ಪ್ರಕೃತಿಯ ಸಹಜತೆಯನ್ನು ನೋಡಿ
(4) ಅಧ್ಯಯನಶೀಲ ಮಾಸ್ತರ ಸಿದ್ರಾಮಪ್ಪ ಅವರನ್ನು ನೋಡಿ

134. ಪಾಟೀಲರು ಮೊದಲಿಗೆ ಇದ್ದ ರೀತಿ ಯಾವುದು ?

(1) ವಿನಯಶೀಲರಾಗಿ
(2) ಸಿಡುಕು ಮನಸ್ಸಿನವರಾಗಿ
(3) ನಿಯಮಬದ್ಧ ಗಂಡನಾಗಿ
(4) ಗಂಡುದರ್ಪದಲ್ಲಿ

135. ಪಾಟೀಲರಿಗೆ ಮುಂಜಾನೆ ಎದ್ದ ಕೂಡಲೇ ಏನು ಬೇಕು ಅನಿಸುತ್ತದೆ ?

(1) ನೀರು
(2) ಕಾಫಿ
(3) ಚಹಾ
(4) ನಿಂಬೆರಸ

136. ಮಕ್ಕಳಿಗೆ ಕಥೆ ಹೇಳುವುದಕ್ಕೆ ಸಂಬಂಧಿಸಿದಂತೆ ಈ ಕೆಳಗಿನವುಗಳಲ್ಲಿ ಯಾವುದು ಸರಿಯಲ್ಲ ?

(1) ಸಮಸ್ಯೆ ಪರಿಹಾರದ ಕೌಶಲ್ಯಗಳನ್ನು ಅಭಿವೃದ್ಧಿಗೊಳಿಸುವುದು
(2) ಜೀವನದಲ್ಲಿ ಅನುಸರಿಸುವುದಕ್ಕೆ ಹೊಸ ನೈತಿಕ ಮೌಲ್ಯಗಳನ್ನು ಕಲಿಯುವುದು
(3) ಹೊಸ ಪದಗಳನ್ನು ಕಲಿತು ಅವರ ಶಬ್ದ ಸಂಪತ್ತನ್ನು ಬೆಳೆಸಿಕೊಳ್ಳುವುದು
(4) ವಾಕ್ಯ ರಚನೆಯನ್ನು ಕಲಿಯುವುದು

137. ವಿಷಯಕ್ಕೆ ಸಂಬಂಧಿಸಿದಂತೆ, ಪ್ರಸ್ತುತವಾದ ವಿಡೀಯೊ ಅನ್ನು ಹುಡುಕಿ ಅಧ್ಯಾಪಕಿಯು ಜೋಡಿ ಕೆಲಸದ ವಿದ್ಯಾರ್ಥಿಗಳ ಚಟುವಟಿಕೆಯನ್ನು ಮಾಡಿಸುತ್ತಾಳೆ. ವಿದ್ಯಾರ್ಥಿಗಳು ಜೋಡಿಯಾಗಿ ಮಾಡುವ ಈ ಚಟುವಟಿಕೆಯು ವಿದ್ಯಾರ್ಥಿಗಳನ್ನು ಈ ದೃಷ್ಟಿಯಿಂದ ಉತ್ತೇಜಿಸುತ್ತದೆ :

(1) ಶಿಕ್ಷಕರನ್ನು ಬಿಟ್ಟು ಸ್ವಂತವಾಗಿ ಕೆಲಸ ಮಾಡಲು ಪ್ರೇರೇಪಣೆ

(2) ಭಾಷಾ ತಿಳುವಳಿಕೆಯನ್ನು ಹೆಚ್ಚಿಸುವುದು

(3) ಅವರ ಸ್ವಂತ ಚಟುವಟಿಕೆಯನ್ನು ಮೌಲ್ಯಮಾಪನ ಮಾಡಿಕೊಳ್ಳುವುದು

(4) ಜೊತೆಗೂಡಿ ವೇಗವಾಗಿ ಕೆಲಸ ಮಾಡುವಂತೆ ಪ್ರೇರೇಪಣೆ

138. ಭಾಷಾ ಕಲಿಕೆಯಲ್ಲಿ ಸಣ್ಣ ಕಥೆಗಳು ಹಾಗೂ ಇತರ ಕಥನಗಳನ್ನು ಸಹಾಯಕ ಓದಿಗೆಂದು ಇಡಲಾಗಿದೆ. ಸಹಾಯಕ ಓದಿನ ಪ್ರಮುಖ ಉದ್ದೇಶವೇನು ?

(1) ನೈತಿಕ ಕಲಿಕೆಯನ್ನು ಬೆಳೆಸುವುದು

(2) ತೀವ್ರವಾದ ಹೊರ ಓದನ್ನು ಬೆಳೆಸುವುದು

(3) ಬಹುಭಾಷಿಕತ್ವವನ್ನು ಬೆಳೆಸುವುದು

(4) ತೀವ್ರ ಓದನ್ನು ಬೆಳೆಸುವುದು

139. ಐದನೆಯ ತರಗತಿಯ ಅಧ್ಯಾಪಕಿಯು ಕಥೆಯನ್ನು ಬರೆಯುವ ಕೆಲಸವನ್ನು ವಿದ್ಯಾರ್ಥಿಗಳಿಗೆ ಕೊಡುತ್ತಾಳೆ. ಅವರು ಬರೆಯುತ್ತಿರುವಾಗ ಅಧ್ಯಾಪಕಿ ಕ್ಲಾಸಿನಲ್ಲಿ ಓಡಾಡುತ್ತ ತಪ್ಪು ಮಾಡುವ ವಿದ್ಯಾರ್ಥಿಗಳಿಗೆ ಸಹಾಯ ಮಾಡುತ್ತಿರುತ್ತಾಳೆ, ಅಥವಾ ಹೊಸ ಶಬ್ದಗಳನ್ನು ಕೇಳುತ್ತಾಳೆ.

ಇಲ್ಲಿ ಅಧ್ಯಾಪಿಕೆಯ ಪಾತ್ರ :

(1) ಫೆಸಿಲಿಟೇಟರ್ (ಸೌಲಭ್ಯ ಕಲ್ಪಿಸುವ)

(2) ಕಂಡುಹಿಡಿಯುವವಳು (Diagnoticism)

(3) ಮ್ಯಾನೇಜರ್

(4) ಪ್ಲಾನರ್

140. ಈ ಕೆಳಗಿನವುಗಳಲ್ಲಿ ಯಾವುದು ಭಾಷೆಯ ಪ್ರಮುಖ ಜವಾಬ್ದಾರಿ ?

(1) ಕಲಿಯುವವರನ್ನು ವಿಭಿನ್ನ ತರಗತಿಗಳಿಗೆ ಗುಂಪು ಮಾಡುವುದು

(2) ಕಲಿಯುವವರಿಗೆ ಸೂಚನೆ ಕೊಡುವುದು

(3) ಕಲಿಯುವವನ ಸಂವಹನದ ಆವಶ್ಯಕತೆಯನ್ನು ಗುರುತಿಸುವುದು

(4) ಕಲಿಸಲು ವಿಷಯವನ್ನು ಆಯ್ಕೆ ಮಾಡುವುದು

141. **ಹೇಳಿಕೆ (A) :** ಓದುವುದು ಅಂದರೆ ಪದವನ್ನು ಸರಿಯಾಗಿ ಉಚ್ಚರಿಸುವುದಕ್ಕಿಂತ ಹೆಚ್ಚಿನದು.

**ಕಾರಣ (R) :** ಓದುವುದು ಅಂದರೆ ನಿಸ್ಸಂಕೇತಗೊಳಿಸುವುದು (Decoding).

ಈ ಕೆಳಗಿನವುಗಳಲ್ಲಿ **ಸರಿಯಾದ** ಆಯ್ಕೆಯನ್ನು ಮಾಡಿ.

(1) **(A)** ಸರಿಯಾಗಿದೆ, ಆದರೆ **(R)** ತಪ್ಪು.

(2) **(A)** ತಪ್ಪು, ಆದರೆ **(R)** ಸರಿ ಇದೆ.

(3) **(A)** ಮತ್ತು **(R)** ಎರಡೂ ಸರಿ, ಮತ್ತು **(R)** ಅನ್ನುವುದು **(A)** ಯ ಸರಿಯಾದ ವಿವರಣೆಯಾಗಿದೆ.

(4) **(A)** ಮತ್ತು **(R)** ಎರಡೂ ಸರಿ, ಆದರೆ **(R)** ಅನ್ನುವುದು **(A)** ಯ ಸರಿಯಾದ ವಿವರಣೆ ಅಲ್ಲ.

Prepp
Your Personal Exams Guide

**142.** ಭಾಷಾ ಕಲಿಕೆಯಲ್ಲಿ ಈ ಕೆಳಗಿನವುಗಳಲ್ಲಿ ಯಾವುದು **ಸರಿಯಲ್ಲದ** ಊಹೆ ?

(1) ಭಾಷಾ ಕಲಿಕೆಯು ಸಂವಹನ ಚಟುವಟಿಕೆಗಳಿಗೆ ಕೇಂದ್ರೀಕರಿಸಬೇಕು.

(2) ಭಾಷಾ ಕಲಿಕೆಯು ಭಾಷೆಗಿಂತ ಬರಹಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು.

(3) ನಿಜವಾದ ಸಂದರ್ಭಗಳಲ್ಲಿ ಬಳಕೆ ಮಾಡುವ ಪ್ರಯತ್ನದ ಮೂಲಕ ಕಲಿಯುವವರು ಭಾಷೆಯನ್ನು ಸಾಧಿಸುತ್ತಾರೆ.

(4) ಕಲಿಯುವಲ್ಲಿ ಕಲಿಯುವವರ ಮೊದಲನೇ ಭಾಷೆ ಮಹತ್ವದ ಪಾತ್ರ ವಹಿಸುತ್ತದೆ.

**143.** ಭಾಷೆಯ ಗಳಿಕೆಯ ವರ್ತನಾತ್ಮಕ ತತ್ವಕ್ಕೆ (Behaviorist theory) ಈ ಕೆಳಗಿನವುಗಳಲ್ಲಿ ಯಾವುದು ಸಂಬಂಧಿಸಿದ್ದಲ್ಲ ?

(1) ಟ್ರಯಲ್ ಅಂಡ್ ಎರರ್

(2) ಸಾಮಾಜಿಕ ಸಂವಹನ

(3) ವರ್ತನಾಶೀಲ ಸ್ಥಿತಿ (Operant condition)

(4) ಖಾಲಿ ಪಾತ್ರೆ (Empty vessel)

**144.** ಮಕ್ಕಳನ್ನು ಭಾಷೆಯ ಕೆಳಗಿನ ಈ ಸ್ವರೂಪಕ್ಕೆ ಅವಕಾಶ ಮಾಡಿಕೊಡಬೇಕು ಮತ್ತು ಅದರಲ್ಲಿ ಸಂಲಗ್ನವಾಗುವ ಹಾಗೆ ಮಾಡಬೇಕು :

(1) ಚಿಕ್ಕಂದಿನಿಂದಲೇ ಅನೇಕ ಮೌಖಿಕ ಭಾಷೆಗಳಿಗೆ

(2) ಚಿಕ್ಕಂದಿನಿಂದಲೇ ಅನೇಕ ಬರಹದ ಭಾಷೆಗಳಿಗೆ

(3) ಮೊದಲ ವಯಸ್ಸಿನಿಂದಲೇ ಎರಡು ಮೌಖಿಕ ಭಾಷೆಗಳಿಗೆ

(4) ಮೊದಲ ವಯಸ್ಸಿನಿಂದಲೇ ಎರಡು ಬರಹದ ಭಾಷೆಗಳಿಗೆ

**145.** **ಹೇಳಿಕೆ (A) :** ಮೊದಲ ಸಾಕ್ಷರತೆಯಲ್ಲಿ ಚಿತ್ರ ಬರೆಯುವುದು ಬರೆಯುವದರ ಪ್ರಾರಂಭವಾಗಿದೆ.

**ಕಾರಣ (R) :** ಚಿತ್ರಗಳು ಸಂಕೇತಗಳಾಗಿದ್ದು ಅರ್ಥವನ್ನು ಹೇಳುತ್ತಿರುತ್ತವೆ.

ಈ ಕೆಳಗಿನವುಗಳಲ್ಲಿ **ಸರಿಯಾದುದನ್ನು** ಆಯ್ಕೆ ಮಾಡಿ.

(1) **(A)** ಸರಿ, ಆದರೆ **(R)** ತಪ್ಪು.

(2) **(A)** ತಪ್ಪು, ಆದರೆ **(R)** ಸರಿ ಇದೆ.

(3) **(A)** ಮತ್ತು **(R)** ಸರಿ, ಮತ್ತು **(R)** ಅನ್ನುವುದು **(A)** ಯ ಸರಿಯಾದ ವಿವರಣೆ.

(4) **(A)** ಮತ್ತು **(R)** ಸರಿ, ಆದರೆ **(R)** ಅನ್ನುವುದು **(A)** ಯ ಸರಿಯಾದ ವಿವರಣೆ ಅಲ್ಲ.

**146.** ಭಾಷಾ ಚಟುವಟಿಕೆಯ ಶಿಕ್ಷಕಿಯು ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳ ಗುಂಪನ್ನು ಮಾಡುತ್ತಾಳೆ. ಈ ವಿಭಿನ್ನ ಸಾಮರ್ಥ್ಯದಿಂದ ಕೂಡಿದ ಗುಂಪನ್ನು ಮಾಡುವ ಉದ್ದೇಶ :

(1) ವಿದ್ಯಾರ್ಥಿಗಳು ಇನ್ನೊಬ್ಬರಿಗೆ ಸಹಾಯ ಮಾಡುವುದನ್ನು ಉತ್ತೇಜಿಸುವುದು

(2) ಅಧ್ಯಾಪಕಿಯು ಎಲ್ಲರ ಕಡೆ ಗಮನ ಕೊಡಲು ಸಾಧ್ಯವಿಲ್ಲ ಆದ್ದರಿಂದ ಅವಳ ಹೊರೆಯನ್ನು ಕಡಿಮೆ ಮಾಡುವುದು

(3) ಜಾಣನಲ್ಲದ ವಿದ್ಯಾರ್ಥಿಯನ್ನು ಗುರುತಿಸುವುದು

(4) ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಹೇಳಲು ಅವಕಾಶ ಮಾಡುವುದು

147. ವಿದ್ಯಾರ್ಥಿಯಿಂದ ತಾನು ಓದಿದ ಕಥೆಯನ್ನು ಮತ್ತೆ ಅವನ/ಅವಳ ಪದಗಳಲ್ಲಿ ಹೇಳುವುದು ಈ ಮೌಲ್ಯಮಾಪನ ಮಾಡಲು ಸಹಾಯ ಮಾಡುತ್ತವೆ :

(1) ಅರಿತುಕೊಳ್ಳುವಿಕೆ (2) ನೆನಪು

(3) ನಿಖರತೆ (4) ನಿರರ್ಗಳತೆ

148. **ಹೇಳಿಕೆ (A)** : ಪರಿಹಾರಾತ್ಮಕ ಬೋಧನೆ (Remedial) ಯು ಕಲಿಸುವಿಕೆ–ಕಲಿಯುವಿಕೆಯ ಪ್ರಕ್ರಿಯೆಯು ಅಂತರ್ಗತ ಭಾಗವಾಗಿದೆ.

**ಕಾರಣ (R)** : ಪರಿಹಾರಾತ್ಮಕ ಬೋಧನೆ ಅಂದರೆ ಮತ್ತೆ ಬೋಧಿಸುವುದು, ಆದರೆ ವಿದ್ಯಾರ್ಥಿಗಳು ಸರಿಯಾಗಿ ಕಲಿಯದೇ ಇರುವ ಭಾಷಾ ವಿವರಗಳನ್ನು ಅದೇ ಬಗೆಯಲ್ಲೇ ಕಲಿಯಬೇಕೆಂದಿಲ್ಲ.

ಈ ಕೆಳಗಿನವುಗಳಲ್ಲಿ **ಸರಿಯಾದ** ಉತ್ತರವನ್ನು ಆಯ್ಕೆ ಮಾಡಿ.

(1) **(A)** ಸರಿಯಾಗಿದೆ, ಆದರೆ **(R)** ತಪ್ಪು.

(2) **(A)** ತಪ್ಪು, ಆದರೆ **(R)** ಸರಿಯಾಗಿದೆ.

(3) **(A)** ಮತ್ತು **(R)** ಎರಡೂ ಸರಿ, ಮತ್ತು **(R)** ಅನ್ನುವುದು **(A)** ಯ ಸರಿಯಾದ ವಿವರಣೆಯಾಗಿದೆ.

(4) **(A)** ಮತ್ತು **(R)** ಎರಡೂ ಸರಿ, ಆದರೆ **(R)** ಅನ್ನುವುದು **(A)** ಯ ಸರಿಯಾದ ವಿವರಣೆ ಅಲ್ಲ.

149. 'ಕನಿಷ್ಠ ಜೋಡಿ' ಅಭ್ಯಾಸವು ಈ ಕೆಳಗಿನದನ್ನು ಚೆನ್ನಾಗಿ ಮಾಡಲು ಪರಿಣಾಮಕಾರಿಯಾದ ವಿಧಾನವಾಗಿದೆ :

(1) ಉಚ್ಚಾರ (2) ಬರಹಗುಚ್ಛವನ್ನು ಓದುವುದು

(3) ವ್ಯಾಕರಣ (4) ಶಬ್ದ ಸಂಪತ್ತು

150. ಮೊದಲ ಘಟ್ಟದಲ್ಲಿ ಮಕ್ಕಳು ಈ ರೀತಿಯಲ್ಲಿ ಕಲಿಯುವುದು ಶ್ರೇಷ್ಠ ಮತ್ತು ಅನುಕೂಲ :

(1) ಮನೆ ಭಾಷೆಯಲ್ಲಿ

(2) ಇಂಗ್ಲಿಷ್ ಮಾಧ್ಯಮದಲ್ಲಿ

(3) ಕಲಿಕಾ ಮಾಧ್ಯಮದಲ್ಲಿ

(4) ಕಛೇರಿಯ ಭಾಷೆಯಲ್ಲಿ

- o 0 o -

SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. OMR ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು OMR ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/OMR ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ OMR ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬೆಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು OMR ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ OMR ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

Prepp
Your Personal Exams Guide

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस OMR उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक OMR उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं OMR उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं OMR उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/OMR उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी के विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना OMR उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने OMR उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और OMR उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व OMR उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the OMR Answer Sheet is not folded. Do not make any stray marks on the OMR Answer Sheet. Do not write your Roll No. anywhere else except in the specified space in the OMR Answer Sheet.
4. Handle the Test Booklet and OMR Answer Sheet with care, as under no circumstances (except for discrepancy in Test Booklet Code or Number and OMR Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/OMR Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their OMR Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the OMR Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and OMR Answer Sheet shall be detached under any circumstances.
15. **On completion of the test, the candidate must hand over the OMR Answer Sheet to the Invigilator in the Hall / Room.** ***The candidates are allowed to take away this Test Booklet with them.***